(ಶ್ರೀ ಎಚ್. ಕೆ. ವೀರಣ್ಣಗೌಡ)

ಅದು ಆಫೀಸರಿಗೆ ಸೂಪರ್‌ಡೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್ ಮೂಲಕ ಸರ್ಕಾರಕ್ಕೆ ಬರಬೇಕಾಗಿದೆ.

ಶ್ರೀ ಎ. ಮುನಿಯಪ್ಪ.—ಎಕ್ಸಿಕ್ಯೂಟೀವ್ ಇಂಜಿನಿಯರ್, ಸೂಪರ್‌ಟೆಂಡಿಂಗ್ ಇಂಜಿನಿಯರ್, ಮತ್ತು ಚೀಫ್ ಇಂಜಿನಿಯರ್ ಮೂಲಕ ಎಸ್ಟಿಮೇಟ್ ಬಂದು ಮಂಜೂರಾಗುವುದು ಹತ್ತು ವರ್ಷದಲ್ಲಿ ಸಾಧ್ಯ ವಿದೆಯೇ ?

Sri H. K. VEERANNA GOWDH.—It does not arise. It needs no answer.

ಶ್ರೀ ಪಿ. ಆಂಜನಪ್ಪ.—ಈ ಕಳ್ಳಂಬೆಳ್ಳ ಕೆರೆಗಾದರೂ ತೂಬು ಇದೆಯೇ? ನಮ್ಮ ಪಾವಗಡ ತಾಲ್ಲೂಕು ಕೆರೆಗೇನೋ ಇಲ್ಲ.

Mr. SPEAKER.—Order, order.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರಕ್ಕೆ ಮಂಜೂರಿಗೆ ಬಂದ ಎಸ್ಟಿಮೇಟನ್ನು, ತಾವು ಏಕೆ ವಾಪಸ್ಸು ಕಳುಹಿಸಿದಿರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಮಗೆ ಗೊತ್ತಿರುವ ಹಾಗೆ ಮೇಲೆ ಇರುವ ಕೆರೆಗಳಿಗೆ ಅಷ್ಟು ಹಾಕಿದ್ದೀರಿ. ಇದಕ್ಕೇಕೆ ಇಷ್ಟು ಜಾಸ್ತಿ ಹಾಕಿದ್ದೀರಿ ಮುಂತಾದ ಕ್ವೆರಿಗಳು ಮೇಲ್ಪಟ್ಟ ಅಧಿಕಾರಿಗಳಿಂದ ಕೆಲವು ವೇಳೆ ಬರುತ್ತವೆ. ಅವುಗಳನ್ನೆಲ್ಲಾ ಸಮರ್ಥಿಸುವುದಕ್ಕೆ ವಾಪಸು ಹಾಕಿದೆ.

Acquisition Proceedings in some Villages of Chamarajanagar Taluk.

Q.—871. Sri B. RACHIAH (Chamarajanagar).—

Will the Government be pleased to state:—

(*a*) the stages at which the acquisition proceedings in the villages Singanapura, Jannur-Hosur, Navaloor, K. Mookalli, Gootipura, Dadadahalli, Aamchavadi of Chamarajanagar Taluk stand;

(*b*) since how long they are pending in respective offices?

A.—Sri R. CHENNIGARAMAIAH (Minister for Local Self-Government).—

(*a*) & (*b*) The information is as follows:—

(1) *Singanapura*—
This is pending with the Amildar.

(2) *Jannur-Hosur*—
Pending with the Deputy Commissioner.

(3) *Navaloor*—
Pending with the Amildar.

(4) *K. Mookalli*—
Pending with the District Health Officer.

(5) *Gootipura*—
It is pending with the Amildar.

(6) *Dadadahalli*—
Preliminary Notifications have been published.

(7) *Amachavadi*—
The acquisition has been sanctioned by Government in May 1957.

ಶ್ರೀ ಬಿ. ರಾಚಯ್ಯ.—ಯಾವ ಕಾಲದಿಂದ, ಯಾರ ಹತ್ತಿರ, ಈ ಕಾರ್ಯಕ್ರಮಗಳು ಪೆಂಡಿಂಗ್ ಆಗಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಒಂದೊಂದು ಊರಿಗೆ ಒಂದೊಂದು ರೀತಿಯಾಗಿ ಇದೆ.—

ಸಿಂಗನಪುರ	...	1954ನೆಯ ಇಸವಿಯಿಂದ ಪೆಂಡಿಂಗ್ ಇದೆ.
ಜನ್ನೂರು-ಹೊಸೂರು	...	1955ನೆಯ ,,
ನವಲೂರು	...	1956ನೆಯ ,,

ಇವುಗಳೆಲ್ಲಾ ಅಮಲ್ದಾರರ ಆಫೀಸಿನಲ್ಲಿ, ಸಬ್ ಡಿವಿಷನ್ ಆಫೀಸಿನಲ್ಲಿ, ರೆವಿನ್ಯು ಇನ್ಸ್‌ಪೆಕ್ಟರವರಲ್ಲಿ ಮತ್ತು ಡೆಪ್ಯುಟಿ ಕಮಿಷನರವರಲ್ಲಿ ಇತ್ಯರ್ಥದಲ್ಲಿವೆ. ಅದು ಒಂದು ದೊಡ್ಡ ಹಿಸ್ಟರಿ.

ಶ್ರೀ ಬಿ. ರಾಚಯ್ಯ.—ಒಂದೊಂದು ಆಫೀಸಿನಲ್ಲಿ ಎಷ್ಟು ಕಾಲ ರಿಕಾರ್ಡುಗಳನ್ನು ಇತ್ಯರ್ಥಕ್ಕಾಗಿ ಇಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಜಾಸ್ತಿ ಕಾಲ ಕಾಗದಗಳನ್ನು ಇಡಕೂಡದು ಎಂದು ಸೂಚನೆ ಕೊಟ್ಟಿದೆ. ಆದರೆ ಲೆಕ್ಕ ಹಾಕಿ ನೋಡಿದರೆ, ಕಾರ್ಯಕ್ರಮಗಳು ಬಹಳ ವಿಳಂಬವಾಗಿವೆ. ಹೆಚ್ಚಾಗಿ ಅಮಲ್ದಾರರ ಆಫೀಸಿನಲ್ಲಿಯೇ ವಿಳಂಬವಾಗಿದೆ.

ಶ್ರೀ ಕುಂದೂರು ರುದ್ರಪ್ಪ.—ಬಹಳ ಅರ್ಜೆಂಟ್ ಎಂದರೆ ಹತ್ತು ವರ್ಷವೂ ಕಡಮೆಯಾಗುವುದಿಲ್ಲವೇ ?

Mr. SPEAKER.—Too general a question. ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಕುಂದೂರು ರುದ್ರಪ್ಪ.—ಸರ್ಕಾರದವರಿಗೆ ಇತ್ಯರ್ಥ ಮಾಡುವುದಕ್ಕೆ ಏಳು-ಎಂಟು ವರ್ಷಗಳಾದರೂ ಬೇಕಾಗುತ್ತದಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇತ್ಯರ್ಥವಾಗುವುದಕ್ಕೆ ಏನಾದರೂ ತಕರಾರು ಬಂದರೆ, ಅಂತಹ ಸಂದರ್ಭದಲ್ಲಿ ಐದು-ಆರು ವರ್ಷಗಳೂ ಆಗುತ್ತವೆ. ಆರು ತಿಂಗಳಲ್ಲಿ, ಮೂರು ತಿಂಗಳಲ್ಲಿ ಇತ್ಯರ್ಥವಾಗಿರುವ ಕೇಸುಗಳೂ ಇವೆ.

ಶ್ರೀ ಟಿ. ಹನುಮಯ್ಯ.—ವಿಳಂಬವಾಗುವುದಕ್ಕೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆದಷ್ಟು ಬೇಗನೆ ಅಕ್ಯೂಸಿಷನ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಸಕ್ಯೂಲರ್ ಮೂಲಕವೂ, ಪರ್ಸನಲ್ ಇನ್ಸ್‌ಟ್ರಕ್ಷನ್ಸ್ ಮೂಲಕವೂ ತಿಳಿವಳಿಕೆ ಕೊಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸರ್ಕ್ಯುಲರ್‌ನಲ್ಲಿ ಇಷ್ಟೇ ದಿವಸದೊಳಗೆ ಕಾರ್ಯ ಪೂರೈಸಬೇಕೆಂದು ನಿಗದಿಯಾದ ಆರ್ಡರ್ ತಾವು ಕಳುಹಿಸಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಾಮಾನ್ಯವಾಗಿ ಆರು ತಿಂಗಳಲ್ಲಿ ಕಾರ್ಯಕ್ರಮ ಮುಗಿಸಬೇಕೆಂದಿದೆ. ಆದರೆ ಜಮೀನು ಬೇಡ, ಪಂಚಾಯತಿಗಳಲ್ಲಿ ಎರಡು ಭಾಗವಾಗಬೇಕು, ಎನ್ನುವ ತಕರಾರು ಅರ್ಜಿಗಳು ಮತ್ತು ಇನ್ನೂ ಏನೇನೋ ಕಾರಣಗಳು ಬೇಗ ಇತ್ಯರ್ಥವಾಗುವುದಕ್ಕೆ ಅಡ್ಡಿಯಾಗುತ್ತವೆ.

ಶ್ರೀ ಟಿ. ಪಿ. ಬೋರಯ್ಯ.—ವರ್ಬರ್ ಮಿಸ್ಟೇಕಿಗಾಗಿ, ನಣ್ಣ ಪುಟ್ಟ ತಪ್ಪಿಗಾಗಿ, ಮೇಲಿನ ಆಫೀಸಿನಿಂದ ಕೆಳಗಿನ ಆಫೀಸಿಗೆ, ಕೆಳಗಿನ ಆಫೀಸಿನಿಂದ ಮೇಲಿನ ಆಫೀಸಿಗೆ ಫೈಲ್‌ಗಳು ಓಡಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Mr. SPEAKER.—It is too general a question.

ಶ್ರೀ ಎಸ್. ಆರ್. ರಾಮಯ್ಯ.—ಅಕ್ಸಿಸಿಷ್ಟ್ ಆಕ್ಟ್ ಉಪಯೋಗಿಸಿಕೊಂಡು, ಅಕ್ಸೈರ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ?

ಅಧ್ಯಕ್ಷರು.—ಅದು ಜನರಲ್ ಆಯಿತು.

ಶ್ರೀ ಆರ್. ಚೆನ್ನಿಗರಾಮಯ್ಯ.—ಆದಷ್ಟು ಬೇಗನೆ ಮಾಡುವುದಕ್ಕೆ ಸರ್ವಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಕೆಲಸ ಬೇಗ ಮಾಡಬೇಕೆಂದು ಎಷ್ಟೆಷ್ಟು ಸಲ ಯಾವ ಯಾವ ತಾಲ್ಲೂಕು ಆಫೀಸಿಗೆ ಆದೇಶ ಕಳುಹಿಸಿದ್ದೀರಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದರ ತಪಶೀಲು ಇಲ್ಲ.

Mr. SPEAKER.—Question No. 963. The Hon'ble Minister is not present. It will be taken up tomorrow. Next question.

Government Allopathic and Ayurvedic Hospitals in Bidar District.

Q.—1133. Smt. ANNAPURNA BAI RAGATE (Kalyani).—

Will the Government be pleased to state:—

(*a*) the number of Government Allopathic and Ayurvedic Hospitals in Bidar District;

(*b*) the requisite population for providing a hospital by them?

A.—Sri R. M. PATIL (Minister for Health).—

(*a*) 10.
Allopathic 7.
Ayurvedic 3.

(*b*) 10,000 to 15,000 in maidan area,
5,000 in Malnad area.

ಶ್ರೀಮತಿ ಅನ್ನಪೂರ್ಣಾಬಾಯಿ.—ಬದರೆ ಜಿಲ್ಲೆ ಆಸ್ಪತ್ರೆಗಳಲ್ಲ ನರಿಯಾದ ಸೌಕರ್ಯಗಳು ದೊರೆಯುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ನರ್ವೇ ಸಾಧಾರಣವಾಗಿ, ಬದರೆ ಜಿಲ್ಲೆ ಆರೋಗ್ಯ ದೃಷ್ಟಿಯಿಂದ, ಹಿಂದುಳಿದಿದೆ ಎಂದು ಸರ್ಕಾರವು ಒಪ್ಪುತ್ತದೆ. ಆದರೆ ಈ ದವಾಖಾನೆಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಸೌಕರ್ಯಗಳಿವೆ ಎಂದು ಇಷ್ಟು ಮಾತ್ರ ಹೇಳಬಹುದು.

ಶ್ರೀಮತಿ ಅನ್ನಪೂರ್ಣಾಬಾಯಿ.—ಹಾಗಾದರೆ ಈ ಜಿಲ್ಲೆಯಲ್ಲಿ ಇನ್ನೂ ಕೆಲವು ಆಸ್ಪತ್ರೆಗಳನ್ನು ತೆಗೆಯಬೇಕೆಂಬ ಕಾರ್ಯಕ್ರಮ ಇಟ್ಟುಕೊಂಡಿದ್ದೀರಾ?

ಶ್ರೀ ಆರ್. ಎಂ. ಪಾಟೀಲ್.—ಈಗ ಎಕ್.ಇ.ಎಸ್. ಬ್ಲಾಕ್‌ನಲ್ಲಿ ಪ್ರೈಮರಿ ಹೆಲ್ತ್ ಯೂನಿಟ್‌ಗಳ ಯಾವ ಯೋಜನೆಗಳನ್ನೂ ಇಲ್ಲಿಯವರೆಗೆ ಮಾಡಿಲ್ಲ. ಆದರೆ ಬದರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಹೆಚ್ಚಿಗೆ ಸೌಕರ್ಯಗಳನ್ನು ಒದಗಿಸಲು ಈಗಾಗಲೇ ಅಲ್ಲಿಯ ಸಿವಿಲ್ ಸರ್ಜನರಿಗೆ ಮತ್ತು ದವಾಖಾನೆಗಳಲ್ಲಿರುವ ಡಾಕ್ಟರುಗಳಿಗೆ ಸೂಚನೆಗಳನ್ನು ಕೊಟ್ಟಿದೆ. ಇದೇ ಪ್ರಕಾರ ಎಕ್ಸಿಕ್ಯೂಟಿವ್ ಇಂಜಿನಿಯರಿಗೂ ಬಿಲ್ಡಿಂಗ್ ತಯಾರು ಮಾಡುವ ನಲುವಾಗಿ ಪ್ಲಾನ್ಸ್ ಮತ್ತು ಎಸ್ಟಿಮೇಟ್ಸ್ ಸಿದ್ಧಪಡಿಸಲಿಕ್ಕೆ ಹೇಳರಾಗಿದೆ.

Sri BALWANT RAO.—How many such hospitals are in Bhalki and Shantapur?

ಶ್ರೀ ಆರ್. ಎಂ. ಪಾಟೀಲ್.—ಭಲ್ಕಿ ತಾಲ್ಲೂಕಿನಲ್ಲಿ ಎಕ್.ಯು.ಎಸ್. ಬ್ಲಾಕ್ ಇದೆ. ಆದರೆ ದವಾಖಾನೆ ಯೋಗ್ಯ ರೀತಿಯಲ್ಲಿ ಇಲ್ಲ. ಅದನ್ನು ಯಾವ ರೀತಿ ಉತ್ತಮ ಮಾಡಬೇಕು ಎನ್ನುವುದನ್ನು ನೋಡಬೇಕಾಗಿದೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ. ಶಾಂತಪುರದ ಬಗ್ಗೆ ಏನೂ ಯೋಜನೆ ಇಲ್ಲ.

Offices in Atara Kacheri.

Q.—1179. Sri G. SIVAPPA (Chitradurga).—

Will the Government be pleased to state:—

(*a*) the purpose for which the Old Public Offices (Atara Kacheri) is used after the construction of Vidhana Soudha;

(*b*) the number of offices that are located in that building?

A.—Sri H. K. VEERANNA GOWDH (Minister for Public Works).—

(*a*) The High Court and a number of Government Departments are accommodated in the building.

(*b*) Nine.

Sri G. SIVAPPA.—May I know which are those offices that are located in the Atara Kacheri?